ಊ) ಇಲ್ಲ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವು ಒಂದು ಗಮನಾರ್ಹ ಯಶಸ್ಸು. 254 ಯೋಜನೆಗಳಲ್ಲಿ 36 ಯೋಜನೆಗಳು ಕಾರ್ಯಗತಗೊಂಡಿದ್ದು 471.92 ಕೋಟಿ ರೂ.ಗಳ ಬಂಡವಾಳ ಹೂಡಿಕೆಯಾಗಿದೆ ಮತ್ತು ಸುಮಾರು 5000 ಜನರಿಗೆ ಉದ್ಯೋಗವಕಾಶಗಳು ಮೊದಲನೆ ವರ್ಷದಲ್ಲಿ ದೊರೆತಿವೆ. ನಂತರ 9991 ಕೋಟಿ ರೂ.ಗಳ 76 ಯೋಜನೆಗಳು ಕಾರ್ಯಗತದ ವಿವಿಧ ಹಂತಗಳಲ್ಲಿದ್ದು ಸುಮಾರು 37,000 ಜನರಿಗೆ ಉದ್ಯೋಗಾವಕಾಶಗಳು ದೊರೆಯುವ ನಿರೀಕ್ಷೆಯಿದೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಯೋಜನೆಗಳ ಕಾರ್ಯಗತದ ಪ್ರಗತಿಯು ಸುಮಾರು ಶೇ.44ರಷ್ಟಿಗೆ. ಇಷ್ಟೇ ಅಲ್ಲದೆ 16051 ಕೋಟಿ ರೂ.ಗಳ ಅಂದಾಜು ಹೂಡಿಕೆಯ 119 ಯೋಜನೆಗಳು ಅನುಮೋದನೆಯ ವಿವಿಧ ಹಂತಗಳಲ್ಲಿದ್ದು ಸುಮಾರು 47,000 ಜನರಿಗೆ ಉದ್ಯೋಗಾವಕಾಶಗಳು ದೊರೆಯುವ ನಿರೀಕ್ಷೆ ಇದೆ. ಮಾರುಕಟ್ಟೆಯ ಪ್ರತಿಕೂಲ ಪರಿಸ್ಥಿತಿಯಿಂದಾಗಿ ಮತ್ತು ಉದ್ದಿಮೆಗಾರರು ಯೋಜನೆಗಳಿಗೆ ಅಗತ್ಯ ಹಣಕಾಸು ಒದಗಿಸುವಲ್ಲಿ ವಿಫಲವಾಗಿರುವುದರಿಂದ ಉಳಿದ ಯೋಜನೆಗಳು ಅಮಾನತ್ತುಗೊಂಡಿವೆ ಅಥವಾ ರದ್ದುಗೊಂಡಿದೆ.

ಈ ಮೇಲಿನ ಅಂಶಗಳ ಜೊತೆಗೆ ಕರ್ನಾಟಕವು ಬಂಡವಾಳ ಹೂಡಿಕೆಗೆ ಆದ್ಯತೆಯ ಸ್ಥಳವೆಂಬುದನ್ನು ಈ ಸಮಾವೇಶವು ತೋರಿಸಿಕೊಟ್ಟಿದೆ. ಈ ಸಕಾರಾತ್ಮಕ ಅಂಶಗಳನ್ನು ಸಾಧಿಸಲು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಿಂದ ಸಾಧ್ಯವಾಯಿತು.

ಶ್ರೀ ತಿರುಮಲ-ತಿರುಪತಿ ಕ್ಷೇತ್ರದಲ್ಲಿರುವ ಕರ್ನಾಟಕ ವಸತಿ ಗೃಹಗಳಿಂದ ಬರುವ ಆದಾಯ ವಿವರ

3037(1820)

ಶ್ರೀ ಜಯಪ್ರಕಾಶ್ ಹೆಗಡೆ ಕ.(ಬ್ರಹ್ಮಾವರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿರುಪತಿ ಕ್ಷೇತ್ರದಲ್ಲಿರುವ ಕರ್ನಾಟಕ ರಾಜ್ಯ ಚೌಲ್ಟ್ರಿಯಿಂದ ಬಂದ ಆದಾಯ ಎಷ್ಟು? ಅಲ್ಲಿ ಯಾತ್ರಾರ್ಥಿಗಳಿಗೆ ಸೂಕ್ತ ಪ್ರಮಾಣದ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆಯೇ? ಕಳೆದ 3 ವರ್ಷಗಳ ಮಾಹಿತಿ ನೀಡುವುದು?

ಆ) ಯಾತ್ರಾರ್ಥಿಗಳ ವಸತಿ ಬೇಡಿಕೆಗನುಗುಣವಾಗಿ ವಸತಿ ಸೌಲಭ್ಯ ವ್ಯವಸ್ಥೆಯನ್ನು

ಕಲ್ಪಿಸಲಾಗಿದೆಯೇ? ಇಲ್ಲವಾದಲ್ಲಿ ಸೂಕ್ತ ವ್ಯವಸ್ಥೆಗಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು?

ಇ) ವಿಶೇಷತಃ ಕರ್ನಾಟಕದ ಯಾತ್ರಾರ್ಥಿಗಳಿಗೆ ಸೂಕ್ತ ವಸತಿ ಸೌಲಭ್ಯವನ್ನು ಪೂರ್ಣ ಪ್ರಮಾಣದ ವ್ಯವಸ್ಥೆಗಳೊಂದಿಗೆ ಒದಗಿಸಲು ಯೋಜನೆಗಳೇನಾದರೂ ತಯಾರಿಸಲ್ಪಟ್ಟಿದೆಯೇ? ಹಾಗಿದ್ದಲ್ಲಿ ಅದರ ವಿವರಗಳೇನು? ಪ್ರಸ್ತುತ ಇರುವ ಕೊರತೆಗಳನ್ನು ಸುವ್ಯವಸ್ಥಿತಗೊಳಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗುವುದೇ?

ಶ್ರೀ ಬಾಬುರಾವ್ ಚಿಂಚಸನೂರ್ (ಮುಜರಾಯಿ ಸಚಿವರು):

ಅ) ತಿರುಪತಿ-ತಿರುಮಲ ಕ್ಷೇತ್ರದಲ್ಲಿರುವ ಕರ್ನಾಟಕ ರಾಜ್ಯ ಛತ್ರದಲ್ಲಿ ಯಾತ್ರಾರ್ಥಿಗಳಿಗೆ ಸೂಕ್ತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ಈ ಛತ್ರದ 3 ವರ್ಷಗಳ ಆದಾಯ ವೆಚ್ಚ ಕೆಳಕಂಡಂತಿದೆ

ವರ್ಷ	ಆದಾಯ	ಖರ್ಚು
1998-99	ರೂ.45,30,476	ರೂ.39,92,292
1999-00	ರೂ.48,61,651	ರೂ.48,74,058
2000-01	ರೂ.46,72,126	ರೂ.52,83,915

ಆ) ಹಾಲಿ ಇರುವ ವಸತಿಗೃಹಗಳಿಂದಲೇ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಇದರ ಜೊತೆಗೆ ಇನ್ನೂ ಹೆಚ್ಚಿನ ವಸತಿ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ರಾಜ್ಯ ಛತ್ರದ ಆವರಣದಲ್ಲಿ ದಾನಿಗಳ ಯೋಜನೆಯಡಿ 105 ಕೊಠಡಿಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಪ್ರಸ್ತುತ ಈ ಜಾಗದ ಒಡೆತನದ ಬಗ್ಗೆ ಟಿ.ಟಿ.ಡಿ. ಹಾಗೂ ಕರ್ನಾಟಕ ಛತ್ರದ ನಡುವೆ ಸಮಸ್ಯೆ ಇರುವುದರಿಂದ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಅಡಚಣೆಯಾಗಿರುತ್ತದೆ.

ಇ) ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರ ಕಟ್ಟಡದಲ್ಲಿ ಭಕ್ತಾದಿಗಳಿಗಾಗಿ ಹೆಚ್ಚಿನ ವಸತಿ ಸೌಕರ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಕೆಲವು ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.50.71 ಲಕ್ಷಗಳ ಅಂದಾಜುಪಟ್ಟಿ ತಯಾರಿಸಲಾಗಿದೆ. ಈ ಸಂಬಂಧ ಆದೇಶ ಸಂಖ್ಯೆ : ಕಂಇ 76 ಮುನೇಪ 2000 ದಿನಾಂಕ:11-5-2000ರಲ್ಲಿ ರೂ.50.00 ಲಕ್ಷಗಳನ್ನು ಅನುದಾನ ಮಂಜೂರು ಮಾಡಿದೆ. ಹಾಗೂ ಆದೇಶ

ಸಂ.ಕಂಇ 20 ಮುಹಕಾ 2000 ದಿ: 9-5-2001ರಲ್ಲಿ ರೂ.50.00 ಲಕ್ಷಗಳಿಗೆ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಸದರಿ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗದವರಿಂದ ಕೈಗೊಳ್ಳಲಿದ್ದು ರೂ.50.00 ಲಕ್ಷಗಳನ್ನು ಕಾರ್ಯಪಾಲಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ ಇವರಿಗೆ ತೇವಣಿ ಮಾಡಲಾಗಿದೆ. ನಿಯಮಾನುಸಾರ ದುರಸ್ತಿ ಕಾರ್ಯವನ್ನು ಶೀಘ್ರದಲ್ಲಿಯೇ ಕೈಗೊಳ್ಳುವ ಪ್ರಕ್ರಿಯೆ ನಡೆದಿದೆ.

ಉಡುಪಿ ತಾಲ್ಲೂಕಿನಲ್ಲಿರುವ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಜಮೀನುಗಳ ವಿವರ.

3038(1821)

ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮಾವರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಕ್ಷೇತ್ರ ಶ್ರೀ ಅನಂತ ಪದ್ಮನಾಭ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನಿನ ವಿವರಗಳೇನು? ಲ್ಯಾಂಡ ಟ್ರಿಬ್ಯೂನಲ್ ಆ್ಯಕ್ಟ್‌ನ ಕೆಳಗೆ ದೇವಸ್ಥಾನದಿಂದ ಕೈಬಿಟ್ಟ ಜಮೀನಿನ ಪ್ರಮಾಣ ಎಷ್ಟು?

ಆ) ಈ ದೇವಸ್ಥಾನದ ಜಮೀನಿನ ಕುರಿತು ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಎಷ್ಟು ಅರ್ಜಿಗಳು ಇತ್ಯರ್ಥವಾಗದೇ ಉಳಿದಿವೆ?

ಇ) ದೇವಸ್ಥಾನದ ವ್ಯಾಪ್ತಿಯ ಜಾಗದಲ್ಲಿ ಇತ್ತೀಚಿಗೆ ಅನಧಿಕೃತ ಕಟ್ಟಡಗಳನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ದೇವಸ್ಥಾನದ ವ್ಯಾಪ್ತಿಗೆ ಬರುವ ಆಸ್ತಿಪಾಸ್ತಿಗಳ ಸಂರಕ್ಷಣೆ ಹಾಗೂ ಬಳಕೆಗೆ ಸೂಕ್ತ ಕ್ರಮ ನಿಯಮಗಳನ್ನು ಅನುಸರಿಸಲು ಸರ್ಕಾರ ಮುಂದಾಗುವುದೇ?

ಶ್ರೀ ಬಾಬುರಾವ್ ಚಿಂಚನಸೂರ್ (ಮುಜರಾಯಿ ಸಚಿವರು):

ಅ) ಸದರಿ ದೇವಾಲಯದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ಭೂ ಸುಧಾರಣಾ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ಅಂದಾಜು 1100 ಎಕರೆ ಜಮೀನು ಇದ್ದು, ಈ ಜಮೀನಿನ ಪೈಕಿ ಭೂ ಸುಧಾರಣಾ ಕಾಯ್ದೆ ಪ್ರಕಾರ ಎಷ್ಟು ಜಮೀನು ಬಿಟ್ಟು ಹೋಗಿದೆ